ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ

(ಆರ್ ಪಿ ಸಂಖ್ಯೆ 57)

ನಮೂನೆ ಸಂಖ್ಯೆ 4

ಸಿ ಆರ್ ಪಿ 67

# ಪ್ರಧಾನ ಜೆ ಎಂ ಎಫ್ ಸಿ ನ್ಯಾಯಾಲಯ ಸಿಂಧನೂರು

## ಸಿ ಸಿ ಸಂಖ್ಯೆಃ 739/2014 CW-1 PW- 1

| | |
|---|---|
| ಹೆಸರು | ಡಿ. ಮಲ್ಲಿಕಾರ್ಜುನ |
| ತಂದೆಯ ಹೆಸರು | ದಶರಥ್ |
| ವಯಸ್ಸು | 40 |
| ಉದ್ಯೋಗ | ಸಹಾಯಕ ಶಾಖಾ ವ್ಯವಸ್ಥಾಪಕರು ಶ್ರೀರಾಮಚಿಟ್ಸ್ |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕ ಃ 04-10-2021

ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ

ಚಾ.ಸಾ. 2 ರಿಂದ 24ರವರು ಪರಿಚಯ ಇರುತ್ತಾರೆ. ಆರೋಪಿತರ ಪರಿಚಯ ಇರುತ್ತದೆ.

ದಿ: 23-08-2013 ರಂದು ತಾಂತ್ರಿಕ ಲೆಕ್ಕ ಪರಿಶೋಧಕರು ನಮ್ಮ ಶಾಖೆಗೆ ಬಂದಾಗ ಬಂಗಾರದ ಅಡಮಾನ ಸಾಲದ ಲೆಕ್ಕ ಪರಿಶೋಧನೆ ಮಾಡುವಾಗ ದಿ: 25-06-2013 ರಿಂದ 22-08-2013ರ ವರೆಗೆ ಬಂಗಾರದ ಸಾಲದಲ್ಲಿ ಅವ್ಯವಹಾರ ಆಗಿರುವ ಬಗ್ಗೆ ತಿಳಿದುಬಂದಿರುತ್ತದೆ. ಅಂದಾಜು 60 ಲಕ್ಷ ಕಿಮ್ಮತ್ತಿನ ಬಂಗಾರದ ಸಾಮಾನುಗಳನ್ನು ಬದಲಿಸಿ ಆ ಜಾಗದಲ್ಲಿ ನಕಲಿ ಬಂಗಾರದ ವಸ್ತುಗಳನ್ನು ಮತ್ತು ಬೇರೆ ವಸ್ತುಗಳನ್ನು ಇಟ್ಟು ಅವ್ಯವಹಾರ ಆಗಿರುವುದು ಕಂಡುಬಂದಿರುತ್ತದೆ. ಲೆಕ್ಕ ಪರಿಶೀಲನೆ ಮುಂದುವರೆದಿದ್ದು ಇನ್ನೂ 2 ದಿನದಲ್ಲಿ ಪೂರ್ಣ ಮಾಹಿತಿ ನೀಡಿತ್ತೇವೆ ಅಂತಾ ಲೆಕ್ಕ ಪರಿಶೋಧಕರು ಹೇಳಿದರು. ಈ ಅವ್ಯವಹಾರದ ಸಮಯದಲ್ಲಿ ಲಾಕರ್ ಕೀಲಿಗಳು ಆರೋಪಿ ಶಿವಕುಮಾರ ಮತ್ತು ವೀರಮ್ಮ ಇವರ ಹತ್ತಿರ ಇದ್ದವು. ಎಲ್ಲಾ ಬಂಗಾರದ ಆಭರಣಗಳು ಗ್ರಾಹಕರದ್ದಾಗಿದ್ದು, ಅವುಗಳನ್ನು ಗ್ರಾಹಕರಿಗೆ ಮರಳಿ ಕೊಡಬೇಕಾಗಿರುವುದರಿಂದ ದಿ: 25-06-2013 ರಿಂದ 22-08-2013ರ ವರೆಗೆ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಶಿವಕುಮಾರ ಮತ್ತು ವೀರಮ್ಮ ಇವರು ಸದರಿ ಬಂಗಾರದ ಸಾಮಾನುಗಳನ್ನು ದುರುಪಯೋಗಪಡಿಸಿಕೊಂಡಿದ್ದು ನಾವು ಆ ಕುರಿತು ದಿ: 23-08-2013ರಂದು ದೂರು ನೀಡಿರುತ್ತೇನೆ.

1ನೇ ಆರೋಪಿ ಶಿವಕುಮಾರ ದಿ: 03-12-2010 ರಿಂದ 2014ರ ವರೆಗೆ ಶ್ರೀರಾಮ ಸಿಟಿ ಯುನಿಯನ್ ಫೈನಾನ್ಸ್‌ದಲ್ಲಿ ಸಹಾಯಕ ವ್ಯವಸ್ಥಾಪಕರು, ಬಂಗಾರದ ಸಾಲ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. 2 ನೇ ಆರೋಪಿ ವೀರಮ್ಮ ದಿ: 24-04-2012 ರಿಂದ 2014ರ ವರೆಗೆ ಸಹಾಯಕ ಕಾರ್ಯನಿರ್ವಾಹಕರು ಅಂತಾ ಶ್ರೀರಾಮ ಸಿಟಿ ಯುನಿಯನ್ ಫೈನಾನ್ಸ್‌ದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಆರೋಪಿತರ ಕೆಲಸ ಅವಶ್ಯಕವಿದ್ದ ಗ್ರಾಹಕರಿಂದ ಗುಣಮಟ್ಟದ ಬಂಗಾರವನ್ನು ಅಡಮಾನವಾಗಿ ಇಟ್ಟುಕೊಂಡು ಸಾಲ ನೀಡುವುದು ಆಗಿತ್ತು. ಸದರಿ ಬಂಗಾರದ ಆಭರಣಗಳನ್ನು ಇಡುವ ಲಾಕರ್‌ನ ಕೀ ಆರೋಪಿತರ ವಶದಲ್ಲಿತ್ತು ಮತ್ತು ಸಂಪೂರ್ಣ

ಸಿ ಸಿ ಸಂಖ್ಯೆಃ 739/2014
CW-1 PW- 1

ಅವರ ಜವಾಬ್ದಾರಿಯಲ್ಲಿತ್ತು. ದಿ: 24-06-2013 ರಂದು ಲೆಕ್ಕ ಪರಿಶೋಧನೆ ಮಾಡಿಕೊಂಡು ಹೋಗಿದ್ದರು. ದಿ: 23-08-2013ರಂದು ನಮ್ಮ ಶಾಖೆಗೆ ಅವ್ಯವಹಾರದ ಬಗ್ಗೆ ತಿಳಿಸಿರುತ್ತಾರೆ.

ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿರುವ ದೂರು ಆಗಿರುತ್ತದೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು.

ನಂತರ ದಿ: 24-08-2013ರಂದು ಸಿಂಧನೂರು ನಗರದ ಬಸವವೃತ್ತದ ಬಸ್ ನಿಲ್ದಾಣದ ಹಿಂದುಗಡೆ ನಟರಾಜ ಕಾಲೋನಿ ಶಬ್ಬೀರ್ ಅಹ್ಮದ್ ನಾಯಕ್ ಇವರ ಒಡೆತನದ ಕಟ್ಟಡ ಮೊದಲನೆ ಮಹಡಿಯಲ್ಲಿರುವ ಶ್ರೀರಾಮ ಚಿಟ್ಸ್ ಫಂಡ್ ಕಾರ್ಯಾಲಯದಲ್ಲಿ ಈಶಾನ್ಯ ಭಾಗದಲ್ಲಿ ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ನಡೆಯುತ್ತಿದ್ದು, ಅದರ ಪ್ರತ್ಯೇಕವಾದ ಕೋಣೆ ಇರುತ್ತದೆ. ಅದರ ಬಾಗಿಲು ಪಶ್ಚಿಮಕ್ಕೆ ಮುಖ ಮಾಡಿ ಇರುತ್ತದೆ. ಅದರ ಮುಂದೆ ಪ್ರತ್ಯೇಕವಾದ ಆಸನಗಳ ವ್ಯವಸ್ಥೆ ಇರುತ್ತದೆ. ಆ ಕೋಣೆಗಳಲ್ಲಿ 3 ಲಾಕರ್‌ಗಳು ಇದ್ದು, ಒಂದು ದೊಡ್ಡ ಲಾಕರ್ ಮತ್ತು 2 ಸಣ್ಣ ಲಾಕರ್‌ಗಳು ಇರುತ್ತವೆ. ಆ ಲಾಕರ್‌ಗಳಲ್ಲಿ ಬಂಗಾದ ಸಾಮಾನುಗಳನ್ನು ಇಡುವುದು ತೆಗೆಯುವುದು ಮಾಡುತ್ತಿದ್ದರು. ಅವುಗಳಲ್ಲಿಯೇ ದುರುಪಯೋಗ ಆಗಿತ್ತು. ಆ ದಿನ ಬೆ. 9-15 ರಿಂದ 10-00ರವರೆಗೆ ಪಿ.ಎಸ್.ಐ. ರವರು ಬಂದು ಪಂಚನಾಮೆ ಮಾಡಿರುತ್ತಾರೆ. ಸ್ಥಳವನ್ನು ನಾನೇ ತೋರಿಸಿದ್ದೇನೆ. ಅದರಲ್ಲಿ 16 ಗೋಲ್ಡ್ ಲೋನ್ ಪಾಕೀಟ್‌ಗಳಿದ್ದು, 16 ಪಾಕೀಟ್‌ಗಳ ಪೈಕಿ 13 ಪಾಕೇಟ್‌ಗಳು ಖಾಲಿ ಇದ್ದವು. 3 ಪಾಕೀಟ್‌ಗಳಲ್ಲಿ ಸಣ್ಣ ಕಲ್ಲು, ಇಟ್ಟಂಗಿಯ ತುಕಡಿ, ಬೆಳ್ಳಿ ಕಾಲು ಚೈನ್‌ಗಳು, 5/- ರೂ. ಕ್ವಾಯಿನ್‌ಗಳು, ಕೀಚೈನ್ ಇದ್ದವು. ಒಂದು ಪಾಕೀಟ್‌ನಲ್ಲಿ ಸಣ್ಣ ಕಲ್ಲು, ಇಟ್ಟಂಗಿ ತುಕಡಿಗಳು, 2 ಜೊತೆ ಕಾಲು ಚೈನ್‌ಗಳು ಇದ್ದವು. 2ನೇ ಪಾಕೀಟ್‌ನಲ್ಲಿ 5/- ರೂ. ಮುಖಬೆಲೆಯ 11 ನಾಣ್ಯಗಳು ಮತ್ತು ಸಣ್ಣ ಕಲ್ಲು ಇದ್ದವು. ಇನ್ನೊಂದರಲ್ಲಿ 4 ಗೋಲ್ಡ್ ಲೋನ್ ಬಿಡಿಸಿಕೊಂಡು ಹೋದ ಕವರ್‌ಗಳು ಇದ್ದವು. 3 ಕ್ಯಾಶ್ ಮಿಸ್‌ಯುಸ್ ಪ್ಯಾಕೇಟ್‌ಗಳು ಇದ್ದವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನಾನು ನೋಡುತ್ತಿರುವ ಒಂದು ಪಾಕೇಟ್ ಗೋಲ್ಡ್ ಲೋನ್ ಸಂ. ಎಸ್.ಡಿ.ಹೆಚ್. ಐ.ಜೆ.ಎಲ್.0001328 ಶಾಖೆ ಸಿಂಧನೂರು ಸಾಲಗಾರರ ಹೆಸರು ಶರಣಪ್ಪ, ದಿ: 03-04-2013 200 ಗ್ರಾಂ ಸಾಲ ರೂ. 4,17,000/- ಅಂತಾ ಬರೆದಿರುತ್ತಾರೆ ಅದರಲ್ಲಿ ಕಲ್ಲು ಮತ್ತು ನಾಣ್ಯಗಳು ಇದ್ದವು. ಅದನ್ನು ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿ ಎರಡು ಕವರ್‌ಗಳಿದ್ದು, ಒಂದು ಕವರ್ ಖಾಲಿ ಇರುತ್ತದೆ. ಇನ್ನೊಂದು ಕವರ್ ತೆರೆದು ನೋಡಲಾಗಿ ಅದರಲ್ಲಿ 4 ಚಿಕ್ಕ ಕಲ್ಲುಗಳು ಇರುತ್ತವೆ. ಒಂದು ಡಬ್ಬಿಯಲ್ಲಿ ರೂ. 5/- ಮುಖಬೆಲೆಯ 11 ನಾಣ್ಯಗಳು, ಚಿಕ್ಕ ಗಿಟಾರ್, 2 ಗೆಜ್ಜೆ, 3 ನಾಣ್ಯದ ತರಹ ಇರುವ ಒಂದು ಕೀಚೈನ್ ಇರುತ್ತದೆ. ಸದರಿ ಪಾಕೇಟ್‌ನ್ನು ಮು.ಮಾ. 1 ಎಂದು, ಸದರಿ ಮು.ಮಾ. 1 ಪಾಕೇಟ್‌ನಲ್ಲಿದ್ದ ಖಾಲಿ ಪಾಕೇಟ್‌ನ್ನು ಮು.ಮಾ. 1 (ಎ) ಎಂದು, 4 ಕಲ್ಲುಗಳು ಇದ್ದ ಪಾಕೇಟ್‌ನ್ನು ಮು.ಮಾ. 1 (ಬಿ) ಎಂದು, ಸದರಿ 4 ಕಲ್ಲುಗಳನ್ನು ಮು.ಮಾ. 1 (ಸಿ) ಯಿಂದ (ಎಫ್) ಎಂದು, ಹಾಗೂ ಮುಸ್ತಾಫ್ ಜುವೆಲರ್ಸ್

ಸಿ ಸಿ ಸಂಖ್ಯೆಃ 739/2014
CW-1 PW- 1

ಹೆಸರುಳ್ಳ ಡಬ್ಬಿಯನ್ನು ಮು.ಮಾ. 1(ಜಿ) ಎಂದು ಮತ್ತು ನಾಣ್ಯ ಹಾಗೂ ಕೀ ಚೈನ್‌ಗಳನ್ನು ಒಟ್ಟಾಗಿ ಮು.ಮಾ. 1 (ಹೆಚ್) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ಇನ್ನೊಂದು ಪಾಕೇಟ್ ಮೇಲೆ ಲೋನ್ ಸಂ. ಎಸ್.ಡಿ.ಹೆಚ್/ ಜೆ.ಎಲ್/0001402 ಶಾಖೆ ಸಿಂಧನೂರು ಸಾಲಗಾರನ ಹೆಸರು ಶರಣಪ್ಪ, ದಿ: 24-05-2013, ತೂಕ 276 ಗ್ರಾಂ, ಸಾಲದ ಮೊತ್ತ ರೂ. 4,35,000/- ಅಂತಾ ಬರೆದಿರುತ್ತಾರೆ. ಅದರಲ್ಲಿ ಕಲ್ಲುಗಳು ಇರುತ್ತವೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿ ಎಂ.ಪಿ. ಜುವೆಲರ್ಸ್ ಎಂಬ ಹೆಸರಿನ ಚಿಕ್ಕ ಬಟ್ಟೆಯ ಪಾಕೇಟ್ ಇದ್ದು, ಅದರಲ್ಲಿ ಒಂದು ಪ್ಲಾಸ್ಟಿಕ್‌ನಲ್ಲಿ 5 ಚಿಕ್ಕ ಕಲ್ಲುಗಳು ಇರುತ್ತವೆ. ಸದರಿ ಪಾಕೇಟ್‌ನ್ನು ಮು.ಮಾ. 2 ಎಂದು, ಮತ್ತು ಅದರಲ್ಲಿರುವ ಬಟ್ಟೆಯ ಪಾಕೇಟ್‌ನ್ನು ಮು.ಮಾ. 2 (ಎ) ಎಂದು ಹಾಗೂ ಕಲ್ಲುಗಳನ್ನು ಮು.ಮಾ. 2 (ಬಿ) ಯಿಂದ (ಎಫ್) ಎಂದು ಗುರುತಿಸಲಾಯಿತು. ಅದರಲ್ಲಿ ಒಂದು ಕಸ್ಟಮರ್ ಕಾಫಿ ವಿಂಡೋಸ್ ಪ್ರಿಂಟರ್ ಪ್ಲಸ್ ಪೇಜ್ ಇದ್ದು ಅದನ್ನು ಮು.ಮಾ. 2(ಜಿ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ಇನ್ನೊಂದು ಪಾಕೇಟ್ ಎಸ್.ಡಿ.ಹೆಚ್/ಜೆ.ಎಲ್ 0001445 ಶಾಖೆ ಸಿಂಧನೂರು, ಸಾಲಗಾರರ ಹೆಸರು ಚಕೋಟಿ ಶೇಖರಪ್ಪ, ದಿ: 19-06-2013, ಬಂಗಾರದ ತೂಕ 406.700 ಗ್ರಾಂ, ಸಾಲದ ಮೊತ್ತ ರೂ. 6,38,000/- ಇದ್ದು ಅದರಲ್ಲಿ ಕಲ್ಲು ಹಾಗೂ ಬೆಳ್ಳಿಯ ಆಭರಣಗಳು ಇರುತ್ತವೆ. ಅದನ್ನು ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿ ಶಹೀನ್ ಜುವೇಲರ್ಸ್ ಹೆಸರಿನ ವೃತ್ತಾಕಾರದ ಒಂದು ಡಬ್ಬಿ ಇದ್ದು, ಅದರಲ್ಲಿ ಒಂದು ಪಾಕೇಟ್‌ನಲ್ಲಿ 2 ಸಣ್ಣ ಕಲ್ಲುಗಳು ಇರುತ್ತವೆ. ಸದರಿ ಪಾಕೇಟ್‌ನ್ನು ಮು.ಮಾ. 3 ಎಂದು, ಡಬ್ಬಿಯನ್ನು ಮು.ಮಾ. 3 (ಎ) ಎಂದು, ಕಲ್ಲುಗಳನ್ನು ಮು.ಮಾ. 3 (ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸದರಿ ಮು.ಮಾ. 3 ಪಾಕೇಟ್‌ನಲ್ಲಿ ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ 2ಜೊತೆ ಬೆಳ್ಳಿಯ ಕಾಲು ಚೈನ್‌ಗಳಿರುತ್ತವೆ. ಅವುಗಳನ್ನು ಒಟ್ಟಾಗಿ ಮು.ಮಾ. 3(ಡಿ) ಎಂದು ಗುರುತಿಸಲಾಯಿತು. ಸದರಿ ಮು.ಮಾ. 3 ಕವರ್‌ನಲ್ಲಿ ಒಂದು ಹಾಳೆಯಲ್ಲಿ 2 ಇಟ್ಟಂಗಿಯ ಚೂರುಗಳು ಹಾಗೂ ಒಂದು ಸಣ್ಣ ಕಲ್ಲು ಇಟ್ಟಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. 3 (ಇ) ಎಂದು ಗುರುತಿಸಲಾಯಿತು. ಮತ್ತು ಒಂದು ರಶೀದಿ ಇದ್ದು, ಸದರಿ ರಶೀದಿಯನ್ನು ಮು.ಮಾ. 3 (ಎಫ್) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ಇನ್ನೊಂದು ಕವರ್ ಮೇಲೆ ಎಸ್.ಡಿ.ಹೆಚ್. ಜೆ.ಎಲ್/0001469 ಶಾಖೆ ಸಿಂಧನೂರು, ಸಾಲಗಾರರ ಹೆಸರು ರಾಜೇಶ್ವರಿ ದಿ: 02-07-2013, ತೂಕ 120.900 ಗ್ರಾಂ. ಸಾಲದ ಮೊತ್ತ ರೂ. 1,89,000/- ಅಂತಾ ಬರೆದಿರುತ್ತಾರೆ. ಅದರಲ್ಲಿ ಒಂದು ರಶೀದಿ ಮಾತ್ರ ಇರುತ್ತದೆ. ಸದರಿ ರಶೀದಿ ಬಂಗಾರದ ಚೈನ್ 100 ಗ್ರಾಂ ಮತ್ತು 2 ಬಳೆ 20 ಗ್ರಾಂ. ಅಂತಾ ಒಟ್ಟು 120 ಗ್ರಾಂ. ಅಂತಾ ತೂಕ ಹೊಂದಿರುವ ರಶೀದಿಯಾಗಿರುತ್ತದೆ. ಸದರಿ ಕವರ್‌ನ್ನು ಮು.ಮಾ. 4 ಎಂದು, ರಶೀದಿಯನ್ನು ಮು.ಮಾ. 4(ಎ) ಎಂದು ಗುರುತಿಸಲಾಯಿತು.

ಸಿ ಸಿ ಸಂಖ್ಯೆಃ 739/2014

CW-1 PW- 1

ಈಗ ನಾನು ನೋಡುತ್ತಿರುವ 3 ಕ್ಯಾಶ್ ಮಿಸ್ ಯುಸ್ ಪಾಕೇಟ್‌ಗಳು ಖಾಲಿ ಇದ್ದು ಅವುಗಳನ್ನು ಮು.ಮಾ. 5 ರಿಂದ 7 ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ಇನ್ನೊಂದು ಹಾಳೆಯಲ್ಲಿ 4 ಗೋಲ್ಡ್ ಮಿಸ್ಡ್ ಪಾಕೇಟ್‌ಗಳಿದ್ದು, ಅವುಗಳನ್ನು ಮು.ಮಾ. 8 ರಿಂದ 11 ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 13 ಖಾಲಿ ಲೋನ್ ಸಂಖ್ಯೆ, ಸಾಲಗಾರರ ಹೆಸರು, ದಿನಾಂಕ, ಬಂಗಾರದ ತೂಕ, ಸಾಲದ ಮೊತ್ತ ಹೊಂದಿರುವ 13 ಪಾಕೇಟ್‌ಗಳಿದ್ದು, ಅವುಗಳಲ್ಲಿ ರಶೀದಿಗಳಿದ್ದು, ಸದರಿ ಪಾಕೇಟ್‌ಗಳನ್ನು ಕ್ರಮವಾಗಿ ಮು.ಮಾ. 12 ರಿಂದ 23 ಎಂದು ಗುರುತಿಸಲಾಯಿತು.

ಸದರಿ ಮು.ಮಾ.ಗಳನ್ನು ಆರೋಪಿತರನ್ನು ಕರೆಯಿಸಿ ಆರೋಪಿತರಿಂದ ಲಾಕರ್‌ಗಳನ್ನು ತೆರೆಯಿಸಿ ವಶಪಡಿಸಿಕೊಂಡಿರುತ್ತಾರೆ.

ಈ ಹಂತದಲ್ಲಿ ಮೂಲ ದಾಖಲಾತಿಗಳನ್ನು ತನಿಖಾಧಿಕಾರಿಗಳು ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಸ.ಸ.ಅ. ರವರು ಕಾಲಾವಕಾಶ ಕೋರಿರುತ್ತಾರೆ, ನಿಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ,

ಪ್ರಧಾನ ಜೆ.ಮ್.ಎಫ್.ಸಿ. ಸಿಂಧನೂರು.